ಎಂದು ಕೇಳಿಬಹುದು, ಆ ಇಲಾಖೆ ನಮಗೆ ಸಂಬಂಧಪಟ್ಟದ್ದು ಅಲ್ಲ, ಸಂಬಂಧಪಟ್ಟ ಮಂತ್ರಿಯವರು ಇಲ್ಲ.

ಅಧ್ಯಕ್ಷರು: ಆಯಿತು, ಇದಕ್ಕೆ ಉತ್ತರ ಮುಂದಿನ ವಾರ ಬರುವಹಾಗೆ ಮಾಡಿ.

ಶ್ರೀ ಡಿ.ಬಿ. ಚಂದ್ರೇಗೌಡ: ಆಗಬಹುದು.

ಶ್ರೀ ಆರಗ ಜ್ಞಾನೇಂದ್ರ : ಮಾನ್ಯ ಅಧ್ಯಕ್ಷರೇ, ಇವರು ಕಂಪ್ಯೂಟರ್, ಈ-ಮೇಲ್ ಎಲ್ಲವನ್ನೂ ಇಟ್ಟುಕೊಂಡು 15 ದಿವಸಗಳಾದರೂ ಉತ್ತರವನ್ನು ತರಿಸುವುದಕ್ಕಾಗುವುದಿಲ್ಲವೆಂದರೆ, ಇನ್ನು ಅಭಿವೃದ್ಧಿ ಕಾರ್ಯಗಳು ಹೇಗೆ ಆಗುತ್ತವೆ?

ಶ್ರೀ ಡಿ.ಬಿ. ಚಂದ್ರೇಗೌಡ : ನಮಗೆ ಏನಾದರೂ ಉತ್ತರ ಸಿಕ್ಕರೆ ಅದಕ್ಕೆ ಫೀಡ್ ಮಾಡಿದರೆ ಉತ್ತರ ಸಿಗುತ್ತದೆ.

ಶ್ರೀ ಆರಗ ಜ್ಞಾನೇಂದ್ರ : ನೀವು ಸಿಕ್ಕಿಲ್ಲವೆಂದರೆ ಹೇಗೆ? ಇದಕ್ಕೆ ಉತ್ತರ ಕೊಡುವಂತಹ ಅಧಿಕಾರಿಗಳು ಸರ್ಕಾರದ ನಿಯಂತ್ರಣದಲ್ಲಿ ಇಲ್ಲವೆಂಬುದನ್ನು ತಾವು ಒಪ್ಪಿಕೊಳ್ಳಿ.

ಶ್ರೀ ಎಸ್.ಎ. ರವೀಂದ್ರನಾಥ್: ಮಾನ್ಯ ಅಧ್ಯಕ್ಷರೇ, ನಾನು ಕೇಳಿರುವಂತಹ ಪ್ರಶ್ನೆ: 157ಕ್ಕೆ ಉತ್ತರವನ್ನು ತರಿಸಬೇಕೆಂದು ಕೇಳಿಕೊಳ್ಳುತ್ತೇನೆ.

ಅಧ್ಯಕ್ಷರು: ನಾವು ಉತ್ತರವ್ನು ತರಿಸಿ ಎಂದು ಹೇಳಿದ್ದೇವಲ್ಲಾ.

ದೊಡ್ಡಬಳ್ಳಾಪುರ ತಾಲ್ಲೂಕಿನಲ್ಲಿ ಸ್ವಸಹಾಯ ಗುಂಪುಗಳ ರಚನೆ

52(178) - ಶ್ರೀ ವಿ.ಕೃಷ್ಣಪ್ಪ (ದೊಡ್ಡಬಳ್ಳಾಪುರ): ಮಾನ್ಯ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

1. ರಾಜ್ಯದಲ್ಲಿ ಈವರೆಗೆ ಎಷ್ಟು ಸ್ವಸಹಾಯ ಗುಂಪುಗಳನ್ನು ರಚಿಸಲಾಗಿದೆ. ರಚಿಸಲಾಗಿರುವ ಗುಂಪುಗಳು ಬ್ಯಾಂಕ್‌ಗಳಲ್ಲಿ ಎಷ್ಟು ಡಿಪಾಸಿಟ್ ಹಣವನ್ನು ಸಂಗ್ರಹಿಸಿದೆ.

2. ದೊಡ್ಡಬಳ್ಳಾಪುರ ತಾಲ್ಲೂಕಿನಲ್ಲಿ ಎಷ್ಟು ಸ್ವಸಹಾಯ ಗುಂಪುಗಳನ್ನು ರಚಿಸಲಾಗಿದೆ. ಎಷ್ಟು ಹಣವನ್ನು ಬ್ಯಾಂಕುಗಳಲ್ಲಿ ಡಿಪಾಸಿಟ್ ಮಾಡಲಾಗಿದೆ.

3. ಡಿಪಾಸಿಟ್ ಮಾಡಿರುವ ಎಲ್ಲಾ ಗುಂಪುಗಳಿಗೆ ಬ್ಯಾಂಕುಗಳಿಂದ ಯಾವ ಯಾವ ಉದ್ದೇಶಕ್ಕೆ ಸಾಲ ಸೌಲಭ್ಯ ನೀಡಲಾಗಿದೆ (ವಿವರ ನೀಡುವುದು).

ಶ್ರೀಮತಿ ಮೋಟಮ್ಮ (ಮಹಿಳಾ ಮತ್ತು ಮಕ್ಕಳ ಕಲ್ಯಾಣ ಸಚಿವರು):

1. ರಾಜ್ಯದಲ್ಲಿ ಮೇ: 2002ರ ಅಂತ್ಯಕ್ಕೆ 75660 ಸ್ವಸಹಾಯ ಗುಂಪುಗಳನ್ನು ರಚಿಸಲಾಗಿದೆ. ಈ ಗುಂಪುಗಳು ಒಟ್ಟು 7358.70 ಲಕ್ಷ ರೂ.ಗಳನ್ನು ಉಳಿತಾಯ ಮಾಡಿರುತ್ತದೆ.

2. ದೊಡ್ಡಬಳ್ಳಾಪುರ ತಾಲ್ಲೂಕಿನಲ್ಲಿ ಮೇ: 2002ರ ಅಂತ್ಯಕ್ಕೆ ಒಟ್ಟು 367 ಸ್ವಸಹಾಯ ಗುಂಪುಗಳನ್ನು ರಚಿಸಿದ್ದು, ರೂ. 37.65 ಲಕ್ಷ ರೂ.ಗಳನ್ನು ಉಳಿತಾಯ ಮಾಡಲಾಗಿದೆ.

3. ದೊಡ್ಡಬಳ್ಳಾಪುರ ತಾಲ್ಲೂಕಿನಲ್ಲಿ ರಚನೆಯಾಗಿರುವ ಸ್ವಸಹಾಯ ಗುಂಪುಗಳಿಗೆ ಬ್ಯಾಂಕುಗಳು ಇನ್ನೂ ಸಾಲಸೌಲಭ್ಯ ನೀಡಬೇಕಿರುತ್ತದೆ.

ಶ್ರೀ ವಿ. ಕೃಷ್ಣಪ್ಪ : ಮಾನ್ಯ ಅಧ್ಯಕ್ಷರೇ, ಸರ್ಕಾರ ಉತ್ತರವನ್ನು ಒದಗಿಸಿದೆ, ರಾಜ್ಯದಲ್ಲಿ 75,660 ಸ್ವಸಹಾಯ ಗುಂಪುಗಳು ರಚನೆ ಆಗಿದೆ, ಮತ್ತೆ 7,358 ಲಕ್ಷ ರೂಪಾಯಿಗಳು ಬ್ಯಾಂಕ್‌ನಲ್ಲಿ ಡಿಪಾಸಿಟ್ ಇದೆ, ಇದರ ಅರ್ಧ ಭಾಗ ಹಣ ನಮ್ಮ ದೊಡ್ಡಬಳ್ಳಾಪುರ ತಾಲ್ಲೂಕಿನಲ್ಲಿ 40 ಲಕ್ಷ ರೂಪಾಯಿಗಳನ್ನು ಡಿಪಾಸಿಟ್ ಮಾಡಿದ್ದಾರೆ. ಆದರೆ ಸರ್ಕಾರದ ವತಿಯಿಂದಾಗಲೀ, ಬ್ಯಾಂಕ್ ವತಿಯಿಂದಾಗಲೀ, ಒಂದು ಮಹಿಳಾ ಗುಂಪಿಗೂ ಹಣ ಸಹಾಯವಾಗಿಲ್ಲ. ಇದರ ಬಗ್ಗೆ ಸರ್ಕಾರ ಏನು ಕ್ರಮ ತೆಗೆದುಕೊಂಡಿದೆ? ಈಗ ಏನು ಸಹಾಯ ಮಾಡುತ್ತಿದೆ? ಇದರಲ್ಲಿ ಎಲ್ಲಾ ಕೂಲಿ ಮಾಡಿ ಹಣ ಕೂಲಿನಾಲಿಮಾಡಿ ದಿನಾ ಉಳಿತಾಯ ಮಾಡಿ ಕಟ್ಟಿರುವಂತಹ ಜನರು, ಇದರಲ್ಲಿ ಯಾವ ಸಾಹುಕಾರರ ದುಡ್ಡಿಲ್ಲ. ಇವರು 1ರೂ, 2ರೂ, ಬ್ಯಾಂಕ್‌ನಲ್ಲಿ ಡಿಪಾಸಿಟ್ ಮಾಡಿದ್ದಾರೆ. ಆದುದರಿಂದ ಇದರ ಬಗ್ಗೆ ಸರ್ಕಾರ ಏನು ಮಾಡಿದೆ? ಮುಂದೆ ಏನು ಮಾಡುತ್ತದೆಂಬುದನ್ನು ಮಾನ್ಯ ಮಂತ್ರಿಯವರು ತಿಳಿಸಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀಮತಿ ಮೋಟಮ್ಮ: ಮಾನ್ಯ ಅಧ್ಯಕ್ಷರೇ, ನಾವು ರಾಜ್ಯದಲ್ಲಿ 75,660 ಗುಂಪುಗಳನ್ನು ರಚನೆ ಮಾಡಿ, ಅವರೇ ನಿಧಿ ಮಾಡಿ 73.58 ಕೋಟಿ ರೂಪಾಯಿಗಳನ್ನು ಹೆಣ್ಣು ಮಕ್ಕಳು ಉಳಿತಾಯ ಮಾಡಿದ್ದಾರೆ. ಈಗಾಗಲೇ ನಾವು 17,314 ಸ್ತ್ರೀ ಶಕ್ತಿ ಗುಂಪುಗಳಿಗೆ 8 ಕೋಟಿ 65 ಲಕ್ಷ ರೂಪಾಯಿಗಳನ್ನು ಬಿಡುಗಡೆ ಮಾಡಿದ್ದೇವೆ. ಅದೂ ಅಲ್ಲದೆ ನಮ್ಮ ಸ್ವರ್ಣ ಜಯಂತಿ ಸ್ವರೋಜ್ ಗಾರ್ ಯೋಜನೆಯಡಿಯಲ್ಲಿ ಸುಮಾರು 2,800 ಗುಂಪುಗಳಿಗೆ 1.40 ಕೋಟಿ ರೂಪಾಯಿಗಳನ್ನು ಬಿಡುಗಡೆ ಮಾಡಿದ್ದೇವೆ. ಇದುವರೆಗೂ ಸುಮಾರು 3,795 ಸ್ತ್ರೀ ಶಕ್ತಿ ಗುಂಪುಗಳಿಗೆ ಆರ್ಥಿಕ ಚಟುವಟಿಕೆಯನ್ನು ಪ್ರಾರಂಭ ಮಾಡಲು ಬ್ಯಾಂಕ್‌ನವರೂ ಸಹ 7.56 ಕೋಟಿ ರೂಪಾಯಿಗಳು ಸಾಲವನ್ನು ಮಂಜೂರು ಮಾಡಿರುತ್ತಾರೆ, ದೊಡ್ಡಬಳ್ಳಾಪುರದಲ್ಲಿ ಸುಮಾರು 102 ಗುಂಪುಗಳಿಗೆ ತಲಾ 5,000 ರೂಪಾಯಿಗಳಂತೆ 5,10,000 ರೂಪಾಯಿಗಳನ್ನು ಕೊಟ್ಟಿದ್ದೇವೆ.

ಶ್ರೀ ವಿ. ಕೃಷ್ಣಪ್ಪ: ತಾವು ದೊಡ್ಡಬಳ್ಳಾಪುರ ತಾಲ್ಲೂಕಿಗೆ ಹಣ ಏನು ಕೊಟ್ಟಿದ್ದಾರೆ, ಎಷ್ಟು ಮಾಡಿದ್ದಾರೆಂಬುದನ್ನು ತಿಳಿಸಲಿಲ್ಲ, ಇವರು ಏನು ಕೊಟ್ಟಿದ್ದಾರೋ, ಅದರ ಬಗ್ಗೆ ಸಂತೋಷ, ಆದರೆ ಅವರು ಈ ಉತ್ತರದಲ್ಲಿ ತಿಳಿಸಲಿಲ್ಲ.

ಅಧ್ಯಕ್ಷರು: ಮಾನ್ಯ ಮಂತ್ರಿಯವರೇ, ದೊಡ್ಡ ಬಳ್ಳಾಪುರದಲ್ಲಿ ಸ್ವಸಹಾಯ ಗುಂಪುಗಳ ಬಗ್ಗೆ ಹೇಳಿ.

ಶ್ರೀಮತಿ ಮೋಟಮ್ಮ: ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರು ಆ ಪ್ರಶ್ನೆ ಕೇಳಿಲ್ಲ.

ಶ್ರೀ ವಿ. ಕೃಷ್ಣಪ್ಪ : ಈ ಮಾಹಿತಿ ನಮ್ಮಲ್ಲಿ ಇಲ್ಲ.

ಶ್ರೀಮತಿ ಮೋಟಮ್ಮ: ಮಾನ್ಯ ಸದಸ್ಯರು, ತಾವು ದೊಡ್ಡ ಬಳ್ಳಾಪುರಕ್ಕೆ ಎಷ್ಟು ಹಣವನ್ನು ರಿಲೀಜ್ ಮಾಡಿದ್ದೀರೆಂದು ಕೇಳಿಲ್ಲ, ಎಷ್ಟು ಗುಂಪುಗಳು ಆಗಿದೆ, ಎಷ್ಟು ಉಳಿತಾಯ ಮಾಡಿದ್ದಾರೆಂಬ ಬಗ್ಗೆ ಡೀಟೈಲ್ಸ್ ಕೊಟ್ಟಿದ್ದೇವೆ, ನಂತರ ನೀವು ಡಿಪಾಸಿಟ್ ಮಾಡಿರುವಂತಹ ಎಲ್ಲಾ ಗುಂಪುಗಳಿಗೆ ಬ್ಯಾಂಕ್‌ಗಳಿಂದ ಯಾವ ಯಾವ ಉದ್ದೇಶಕ್ಕಾಗಿ ಸಾಲಸೌಲಭ್ಯ ಕೊಟ್ಟಿದೆ ಎಂಬುದನ್ನು ಕೇಳಿದ್ದೀರಿ.

ಶ್ರೀ ವಿ. ಕೃಷ್ಣಪ್ಪ: ನಾವು ಯಾವ ಯಾವ ಉದ್ದೇಶಕ್ಕೆ ಕೊಡಲಾಗಿದೆ ಎಂಬುದನ್ನು ಕೇಳಿದ್ದೇವೆ, ಅದಕ್ಕೆ ವಿವರ ಇಲ್ಲ.

ಶ್ರೀಮತಿ ಮೋಟಮ್ಮ: ಅದು ಹಲವಾರು ಆದಾಯ ತರುವಂತಹ ಚಟುವಟಿಕೆಗಳು ಇರಬಹುದು ಹಣ್ಣು ಮಾರುವವರಿಗೆ ಇರಬಹುದು, ತರಕಾರಿ, ಹೂವು, ಅಥವಾ ಹಸುವಿನ ಸಾಲಕ್ಕೆ, ಗಿರಿರಾಜ ಕೋಳಿ ಸಾಕಾಣಿಕೆಗೆ ಇರಬಹುದು, ಈ ತರಹದ್ದಕ್ಕೆ ನಾವು ಬ್ಯಾಂಕ್‌ನಿಂದ ಸಾಲ ಕೊಡಬೇಕು ಎಂದು ಹೇಳಿದ್ದೇವೆ.

ಶ್ರೀ ವಿ. ಕೃಷ್ಣಪ್ಪ: ಅದನ್ನೇ ಮಾಹಿತಿ ಕೊಡಬೇಕು.

ಶ್ರೀಮತಿ ಮೋಟಮ್ಮ: ತಾವು ಪ್ರಶ್ನೆ ಕೇಳಿಲ್ಲ. ಈಗ ನೀವು ಕ್ಲಾರಿಫಿಕೇಷನ್ ಕೇಳುತ್ತಿದ್ದೀರಿ, ಅದಕ್ಕೆ ನಾನು ಉತ್ತರ ಹೇಳುತ್ತಿದ್ದೇನೆ.

ಅಧ್ಯಕ್ಷರು: ಆಯಿತು, ಕೊಡುತ್ತಾರೆ.

ಶ್ರೀ ಯು.ಆರ್. ಸಭಾಪತಿ: ಮಾನ್ಯ ಅಧ್ಯಕ್ಷರೇ, ಸ್ವ-ಸಹಾಯ ಗುಂಪುಗಳಿಗೆ ಸರ್ಕಾರದ ವತಿಯಿಂದ ಒಂದೊಂದು ಗುಂಪುಗಳಿಗೂ 5,000 ರೂಪಾಯಿಗಳನ್ನು ಬಿಡುಗಡೆ ಮಾಡುವಂಥ ಕಾರ್ಯಕ್ರಮವನ್ನು ಸರ್ಕಾರ ಹಮ್ಮಿಕೊಂಡಿದೆ. ಆ ರೀತಿಯಾಗಿ 5,000 ರೂಪಾಯಿಗಳನ್ನು ಈ ಗುಂಪುಗಳಿಗೆ ವಿತರಣೆ ಮಾಡಿರುವಂತಹ ಮಾಹಿತಿ ಇದ್ದರೆ ಮಾನ್ಯ ಮಂತ್ರಿಯವರು ಹೇಳಿದರೆ ಒಳ್ಳೆಯದು, ಮತ್ತೆ ಈ ಹಣವನ್ನು 10,000 ರೂಪಾಯಿಗಳಿಗೆ ಹೆಚ್ಚಿಸಬೇಕೆಂದು ಈ ಗುಂಪಿನವರು ಮನವಿಯನ್ನು ಸಲ್ಲಿಸಿದ್ದಾರೆ, ಅದರ ಬಗ್ಗೆ ಸರ್ಕಾರ ಏನು ಕಾರ್ಯಕ್ರಮವನ್ನು ಹಮ್ಮಿಕೊಂಡಿದೆ ಎಂಬುದನ್ನು ತಿಳಿಸಬೇಕು.

ಶ್ರೀಮತಿ ಮೋಟಮ್ಮ: ಮಾನ್ಯ ಅಧ್ಯಕ್ಷರೇ, ನಮ್ಮಲ್ಲಿ 75,660 ಸ್ವಸಹಾಯ ಗುಂಪುಗಳು ರಚನೆ ಆಗಿವೆ, ಆದರೆ ಎಲ್ಲಾ ಗುಂಪುಗಳಿಗೂ ಸುತ್ತು ನಿಧಿಯನ್ನು ಕೊಡುವುದಕ್ಕಾಗುವುದಿಲ್ಲ, ಈ ರೀತಿಯಾಗಿ ನಾವು ಹೇಳಿಲ್ಲ, ನಾವು ಈ ಗುಂಪುಗಳಲ್ಲಿ ಗ್ರೇಡೇಷನ್ ಮಾಡಿದ್ದೇವೆ, ಯಾವುದು ಬೆಸ್ಟ್ ಗುಂಪುಗಳು ಇವೆ, ಈ ಸ್ತ್ರೀ ಶಕ್ತಿ ನಿಯಮಾನುಸಾರ ಅವರು ಪ್ರತಿ ವಾರ ಮೀಟಿಂಗ್ ಸೇರಬೇಕು, ಹಣ ಸೇವಿಂಗ್ಸ್ ಮಾಡಬೇಕು, ಬ್ಯಾಂಕ್‌ನಲ್ಲಿ ಖಾತೆಯನ್ನು ಓಪನ್ ಮಾಡಬೇಕು, ಇಂಟರ್‌ನಲ್ ಲೆಂಡಿಂಗ್ ಸ್ಟಾರ್ಟ್ ಮಾಡಬೇಕು, ಯಾವ ಗುಂಪುಗಳು ಪರ್ಫೆಕ್ಟ್ ಆಗಿ ಕೆಲಸವನ್ನು ಮಾಡಿಕೊಂಡು ಬಂದಿದ್ದಾರೆ, ಅವರಿಗೆ ನಾವು ಮೊದಲ ಹಂತದಲ್ಲಿ ಹಣವನ್ನು ಬಿಡುಗಡೆ ಮಾಡಿದ್ದೇವೆ. ಇದಕ್ಕೆ ಸರ್ಕಾರದಿಂದ ಎಂಟು ಕೋಟಿ ರೂಪಾಯಿಗಳು, ಸ್ವರ್ಣ ಜಯಂತಿ ಸ್ವರೋಜ್‌ಗಾರ್ ಯೋಜನೆಯಿಂದ ಈ ವರ್ಷ 3 ಕೋಟಿ ರೂಪಾಯಿಗಳನ್ನು ಬಿಡುಗಡೆ ಮಾಡಿದ್ದೇವೆ, ಬ್ಯಾಂಕ್ ಮೂಲಕ ಮಾನ್ಯ ಮುಖ್ಯಮಂತ್ರಿಯವರು ಆದೇಶದಂತೆ ಸುಮಾರು ಒಂದು ಕೋಟಿ ರೂಪಾಯಿಗಳ ಸಾಲ ಸೌಲಭ್ಯವನ್ನು ಈ ಸ್ತ್ರೀ ಶಕ್ತಿ ಗುಂಪುಗಳಿಗೆ ಒದಗಿಸಲಾಗಿದೆ. ಈ ಪ್ರಕಾರ ಏಳು ಕೋಟಿ ರೂ. ಚಿಲ್ಲರೆ ಹಣವನ್ನು ನಾವು ಈ ಗುಂಪುಗಳಿಗೆ ಸಾಲದ ರೂಪದಲ್ಲಿ ಕೊಡುವ ವ್ಯವಸ್ಥೆಯನ್ನು ಮಾಡಿದ್ದೇವೆ. ಇದು ಯಾವ್ಯಾವ ಜಿಲ್ಲೆಗಳಿಗೆ ಬಿಡುಗಡೆಯಾಗಿರಲಿಲ್ಲ. ಅವುಗಳಿಗೆ ಇತ್ತೀಚೆಗೆ ಸುಮಾರು 12 ಜಿಲ್ಲೆಗಳಿಗೆ ಹಣವನ್ನು ಬಿಡುಗಡೆ ಮಾಡಿದ್ದೇವೆ. ಹೆಚ್ಚು ಕಡಿಮೆ ಎಲ್ಲಾ ಡಿಸ್ಟ್ರಿಕ್ಟ್ ಗೂ ಮೊದಲನೆ ಕಂತಿನಲ್ಲಿ ಬೆಸ್ಟ್ ಗುಂಪುಗಳಿಗೆ ನಾವು ಈ ಸುತ್ತು ನಿಧಿಯನ್ನು ಬಿಡುಗಡೆ ಮಾಡಿದ್ದೇವೆ.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ (ಅಂಕೋಲ) : ಮಾನ್ಯ ಅಧ್ಯಕ್ಷರೆ, ರಾಜ್ಯದಲ್ಲಿ ಈ ಸ್ವಸಹಾಯ ಗುಂಪುಗಳು, ಸ್ತ್ರೀಶಕ್ತಿ ಗುಂಪುಗಳೆಲ್ಲಾ ಆತ್ಯುತ್ತಮವಾಗಿ ಪ್ರಾರಂಭವಾಗಿದೆ. ಸರ್ಕಾರದಿಂದ ಈ ಬಗ್ಗೆ ಒಳ್ಳೆಯ ಕೆಲಸವಾಗಿದೆ. ಸ್ತ್ರೀ ಸಮುದಾಯದಲ್ಲಿ ಈ ರೀತಿ ಸಾಮಾಜಿಕವಾಗಿ ಪ್ರೋತ್ಸಾಹಿಸುವುದಕ್ಕೆ ಒಳ್ಳೆಯ ಚಟುವಟಿಕೆ ಪ್ರಾರಂಭವಾಗಿರುವುದು ಒಳ್ಳೆಯದು ಆದರೆ ಗ್ರೇಡೇಷನ್ ಮಾಡುತ್ತೇವೆಂದು ಹೇಳಿ ಅವರ ಗುಂಪುಗಳಲ್ಲಿ ಜಗಳಗಳು, ಅವರಲ್ಲಿಯೇ ಒಡಕು ಉಂಟು ಮಾಡುವಂಥ ಪ್ರಯತ್ನವಾಗಿದೆ. ನಮ್ಮ ತಾಲ್ಲೂಕಿನಲ್ಲಿ ಸ್ತ್ರೀಶಕ್ತಿ ಅಥವಾ ಸ್ವಸಹಾಯ ಗುಂಪುಗಳು ಫಸ್ಟ್ ಕ್ಲಾಸ್ ಆಗಿ ಕೆಲಸ ಮಾಡುತ್ತಿದ್ದಾರೆ. ನೀವು ಅರ್ಧದಷ್ಟಕ್ಕೆ ಮಾತ್ರ ಹಣ ಕೊಡುತ್ತಿದ್ದೀರಿ, ಇನ್ನು ಅರ್ಧದಷ್ಟಕ್ಕೆ ಕೊಡುವುದಿಲ್ಲ. ಎಲಿಜಿಬಿಲಿಟಿ ಎಲ್ಲಾ ಗುಂಪುಗಳಿಗೂ ಇದೆ. ಎರಡು ವರ್ಷಗಳ ಹಿಂದೆ ಬಜೆಟ್‌ನಲ್ಲಿ ಹೇಳಿದ್ದೀರಿ, ಈಗ ಒಂದು ವರ್ಷದಿಂದ ಈ ಕೆಲಸ ಪ್ರಾರಂಭವಾದರೂ ನಿಮ್ಮ ಗ್ರೇಡೇಷನ್‌ನಿಂದಾಗಿಯೇ ಸ್ತ್ರೀಶಕ್ತಿ, ಸ್ವಸಹಾಯ ಗುಂಪುಗಳಲ್ಲಿ ಜಗಳವಾಗುತ್ತಿದೆ. ದಯವಿಟ್ಟು ಗ್ರೇಡೇಷನ್‌ನ್ನು ಮಾಡಬೇಡಿ. ಅವರು ಮಾಡುತ್ತಿರುವ ಕೆಲಸವನ್ನು ನೋಡಿದರೆ ಪ್ರಾಮಾಣಿಕವಾಗಿ 10 ಸಾವಿರ ರೂಪಾಯಿಗಳನ್ನು ಗುಂಪಿಗೊಂದರಂತೆ ಕೊಡಬಹುದು. ದಯವಿಟ್ಟು ಎಷ್ಟು ಗುಂಪುಗಳು ರಚನೆ ಆಗಿದೆಯೋ ಅವುಗಳಿಗೆ ಸರ್ಕಾರದಿಂದ ಕೊಡಬೇಕಾದಂಥ ಹಣವನ್ನು 5 ಸಾವಿರ ರೂಪಾಯಿನಂತೆ ತಕ್ಷಣ ಅವರಿಗೆ ಸಿಗುವ ಹಾಗೆ ತಾವು ವ್ಯವಸ್ಥೆ ಮಾಡೇಬಕೆಂದು ಒತ್ತಾಯ ಮಾಡುತ್ತೇನೆ. ಅದರ ಬಗ್ಗೆ ನೀವು ಮಾನ್ಯ ಮುಖ್ಯಮಂತ್ರಿಗಳ ಜೊತೆ ಸರ್ಕಾರದಲ್ಲಿ ಗಂಭೀರವಾಗಿ ಚರ್ಚೆ ಮಾಡಬೇಕು. ಇನ್ನು ಬ್ಯಾಂಕುಗಳು ಸಹಕರಿಸುತ್ತಿಲ್ಲ. ಬ್ಯಾಂಕುಗಳು ಇದಕ್ಕೆ ಪೂರ್ಣವಾದಂಥ ಸಹಕಾರವನ್ನು ಕೊಡುತ್ತಿಲ್ಲ. ಮಹಿಳಾ ಸ್ವಸಹಾಯ ಗುಂಪುಗಳೆಲ್ಲವೂ ಬಹಳ ಉತ್ಸಾಹದಿಂದ ಕೆಲಸ ಮಾಡಲಿಕ್ಕೆ ಮುಂದಾಗಿವೆ. ಆದರೆ ಬ್ಯಾಂಕುಗಳು ಇವರು ಮಾಡಿದಂಥ ಚಟುವಟಿಕೆಗಳಿಗೆ ಪ್ರೋತ್ಸಾಹಿಸುತ್ತಿಲ್ಲ. ಬ್ಯಾಂಕುಗಳಿಗೆ ಅದು ಯಾವ ಭಯವೋ? ಅವರಿಗೆ ನಿಮ್ಮ ಹಿಂದಿನ ಸಾಲ ಮೇಳದ ನೆನಪು ಆಗುತ್ತಿದೆಯೇನೋ? ಹೀಗಾಗಿ ಬ್ಯಾಂಕುಗಳ ಅಧಿಕಾರಿಗಳ ಜೊತೆ ಇದರ ಬಗ್ಗೆ ಗಂಭೀರವಾಗಿ ಚರ್ಚೆ ಮಾಡಿ ಸರ್ಕಾರದಿದ ಸ್ಪಷ್ಟವಾದ ನಿರ್ದೇಶನ ಹೋಗಬೇಕು.

ಶ್ರೀ ಕರಡಿ ಸಂಗಣ್ಣ ಅಮರಪ್ಪ (ಕೊಪ್ಪಳ) : ಮಾನ್ಯ ಅಧ್ಯಕ್ಷರೆ, ಸ್ತ್ರೀಶಕ್ತಿ ಮತ್ತು ಸ್ವಸಹಾಯ ಇದು ಈ ರಾಜ್ಯದಲ್ಲಿ ಬಹಳ ಅತ್ಯುತ್ತಮವಾದಂಥ ಯೋಜನೆಯಾಗಿದ್ದು ಮಹಿಳೆಯರು ಬಹಳಷ್ಟು ಮಟ್ಟಿಗೆ ಇದರಲ್ಲಿ ಇನ್‌ವಾಲ್ವ್ ಆಗಿದ್ದಾರೆ. ಶ್ರೀಮತಿ ಮೋಟಮ್ಮನವರಿಗೆ ಹಣಕಾಸಿನ ನೆರವು ಕಡಿಮೆ ಇರಬಹುದು. ಇಷ್ಟೇ ಗುಂಪುಗಳನ್ನು ನಾವು ವರ್ಗೀಕರಣ ಮಾಡಿದ್ದೇವೆ, ಅವರಿಗೆ ನಾವು ಹಣ ಕೊಡುತ್ತೇವೆಂದು ಅವರು ಹೇಳುತ್ತಾರೆ. ಮಾನ್ಯ ಮುಖ್ಯಮಂತ್ರಿಯವರು ಇದರ ಬಗ್ಗೆ ವಿಚಾರ ಮಾಡಬೇಕೆಂದು ಹೇಳಬಯಸುತ್ತೇನೆ. ಏಕೆಂದರೆ ಜಲಸಂವರ್ಧನೆ ಯೋಜನೆ ಮತ್ತು ಮಹಿಳಾ ಸ್ವಸಹಾಯ ಗುಂಪು, ಇಂಥ ಯೋಜನೆಗಳಿಗೆ ತಾವು ಒತ್ತು ಕೊಡಬೇಕಾಗುತ್ತದೆ. ಇವರು ಬಡವರ ದುಡ್ಡು ಕೂಡಿಟ್ಟುಕೊಂಡು ಅವರ ಆರ್ಥಿಕ ಭದ್ರತೆಯನ್ನು ಮತ್ತು ಸಾಮಾಜಿಕ ಭದ್ರತೆಯನ್ನು ಗುರುತಿಸತಕ್ಕಂಥ ಕೆಲಸಕ್ಕೆ ಪ್ರತಿ ಗುಂಪಿಗೂ ಕೂಡ ಐದು ಸಾವಿರ ರೂಪಾಯಿಗಳನ್ನು ಕೊಡುತ್ತೇವೆಂದು ಮಾನ್ಯ ಮುಖ್ಯಮಂತ್ರಿಯವರು ಬಜೆಟ್ ಭಾಷಣದಲ್ಲಿ ಏನು ಹೇಳಿದ್ದರು ಅದನ್ನು ಕೊಡಲಿಕ್ಕೆ ವ್ಯವಸ್ಥೆ ಮಾಡಬೇಕೆಂದು ನಾನು ತಮ್ಮ ಮೂಲಕ ಮಾನ್ಯ ಮುಖ್ಯಮಂತ್ರಿಯವರನ್ನು ಕೋರುತ್ತೇನೆ.

ಶ್ರೀ ಎನ್. ಯೋಗೀಶ್ ಭಟ್ (ಮಂಗಳೂರು) : ಮಾನ್ಯ ಅಧ್ಯಕ್ಷರೆ, ಸ್ವಸಹಾಯ ಗುಂಪುಗಳಿಗೆ ಬಿಡುಗಡೆ ಮಾಡಿದ ಹಣವನ್ನು ನಾವು ಘೋಷಣೆ ಮಾಡುತ್ತೇವೆ. ಆದರೆ ಹಿಂತೆಗೆದುಕೊಂಡ ಹಣವನ್ನು ಎಲ್ಲಿಯೂ ನಾವು ಉಲ್ಲೇಖ ಮಾಡುವುದಿಲ್ಲ. ನಮ್ಮ ಜಿಲ್ಲೆಯಲ್ಲಿ 29 ಲಕ್ಷ ರೂಪಾಯಿಗಳು ಬಿಡುಗಡೆಯಾಗಿತ್ತು. ಅದರಲ್ಲಿ 22 ಲಕ್ಷ ರೂಪಾಯಿಗಳನ್ನು ವಿಥ್‌ಡ್ರಾ ಮಾಡಿದೆ. ಯಾವ ಅರ್ಥದಲ್ಲಿ ನಾವು ಇದಕ್ಕೆ ಶಕ್ತಿ ಕೊಡಬಹುದು? ಆದ್ದರಿಂದ ಖಂಡಿತವಾಗಿ ಇಂಥ ಹಿಂತೆಗೆದುಕೊಳ್ಳತಕ್ಕಂಥ ಪ್ರೋಸಸ್‌ನ್ನು ಮಾಡಬೇಡಿ.

ಶ್ರೀಮತಿ ಮೋಟಮ್ಮ: ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರುಗಳ ಕಳಕಳಿ ನಮಗೆ ಅರ್ಥವಾಗುತ್ತದೆ. ಈಗ ಶ್ರೀ ವಿಶ್ವೇಶ್ವರ ಹೆಗಡೆಯವರು ಹೇಳಿದ ಹಾಗೆ ಖಂಡಿತವಾಗಿ ಹೆಣ್ಣುಮಕ್ಕಳಲ್ಲಿ ಭಿನ್ನಾಭಿಪ್ರಾಯ ಬರಲಿಕ್ಕೆ ಸಾಧ್ಯವಿಲ್ಲ. ಒಂದು ವೇಳೆ ಅವರು ಸುತ್ತು ನಿಧಿಯನ್ನೇ ಕಾದುಕೊಂಡು ಕುಳಿತಿದ್ದರೆ 73 ಕೋಟಿ ರೂಪಾಯಿಗಳನ್ನು ಉಳಿತಾಯ ಮಾಡುತ್ತಿರಲಿಲ್ಲ. ತಾವು ಇದನ್ನು ಅರ್ಥ ಮಾಡಿಕೊಳ್ಳಬೇಕು. ಅವರಿಗೆ ಒಂದು ಆತ್ಮ ವಿಶ್ವಾಸ ಬಂದಿದೆ. ಸೇವಿಂಗ್ಸ್‌ನಿಂದ ಅವರಿಗೆ ಒಂದು ಆರ್ಥಿಕ ಬಲ ಬಂದಿದೆ. ಈಗ ಏನೋ ತಮ್ಮ ಕಷ್ಟ ಸುಖಕ್ಕೆ ಇಮ್ಮೀಡಿಯೆಟ್ ಆಗಿ 100 ರೂ, 200 ರೂ. 500 ರೂಪಾಯಿಗಳನ್ನು ಸ್ತ್ರೀಶಕ್ತಿಯಿಂದ ತೆಗೆದುಕೊಂಡು ತಮ್ಮ ಈ ಕಷ್ಟವನ್ನು ನಿಭಾಯಿಸಿಕೊಳ್ಳಬೇಕೆಂಬ ಆತ್ಮವಿಶ್ವಾಸ ಇದ್ದಾಗ ಅವರಲ್ಲಿ ಗುಂಪುಗಾರಿಕೆ, ಗುಂಪುಗಳು ಒಡೆದುಹೋಗುವ ಸಾಧ್ಯತೆ ಕಡಿಮೆ. ಆದರೂ ಸಹ ನಾವು ಏನು ಪ್ರಾಮಿಸ್ ಮಾಡಿದ್ದೇವೆ ಅದನ್ನು ಉಳಿಸುವುದಕ್ಕೋಸ್ಕರ ಈಗ ನಾವು ಮೊದಲನೇ ಕಂತಿನಲ್ಲಿ ಇಷ್ಟು ಹಣವನ್ನು ಕೊಡುವುದರ ಜೊತೆಗೆ ಸ್ವರ್ಣ ಜಯಂತಿ ಸ್ವರೋಜ್‌ಗಾರ್ ಯೋಜನೆಯಿಂದಲೂ ಸಹ ಅವರಿಗೆ 5 ಸಾವಿರ ರೂಪಾಯಿಗಳನ್ನು ಕೊಡಿಸುವ ಕೆಲಸವನ್ನು ಮಾಡಿದ್ದೇವೆ. ಅದನ್ನು ಮುಂದೆಯೂ ಮಾಡುತ್ತೇವೆ. ಇದು ಇಲ್ಲಿಗೇ ನಿಲ್ಲುವುದಿಲ್ಲ ಹಾಗೆಯೇ ಬ್ಯಾಂಕ್ ಲಿಂಕೇಜ್ ಸಹ ನಾವು ಮಾಡಲಿಕ್ಕೆ ಈಗಾಗಲೇ ವಿಚಾರ ಮಾಡಿದ್ದೇವೆ. ಅವರಿಗೆ 7 ಕೋಟಿ ರೂಪಾಯಿ ಚಿಲ್ಲರೆ ಕೊಡಲಾಗಿದೆ. ನಾನು ಏನು ಹೇಳುತ್ತೇನೆಂದರೆ, ಹೆಣ್ಣುಮಕ್ಕಳಿಗೆ 20-25 ಸಾವಿರದಷ್ಟು ದೊಡ್ಡ ಮೊತ್ತದ ಸಾಲ ಬೇಕಾಗಿಲ್ಲ. ಮತ್ತೆ ಅವರು ಸಾಲದಲ್ಲಿ ಗಂಡಸರ ಹಾಗೆ ಸಿಕ್ಕಿಹಾಕಿಕೊಳ್ಳಬೇಕಾಗಿಲ್ಲ. ಅವರು ಸಣ್ಣ, ಸ್ವಂತ ಆರ್ಥಿಕ ಚಟುವಟಿಕೆಗಳನ್ನು ಮಾಡಿ ತಮ್ಮ ಆರ್ಥಿಕ ಮೂಲವನ್ನು ಅದರಿಂದ ಸುಧಾರಿಸಿಕೊಳ್ಳಲಿಕ್ಕೆ ಪ್ರಯತ್ನ ಮಾಡಬೇಕೆನ್ನುವುದೇ ನಮ್ಮ ಉದ್ದೇಶ. ಈಗ ಹೆಚ್ಚು ಸಾಲ ಬೇಕೆಂದು ಯಾವ ಹೆಣ್ಣು ಮಕ್ಕಳೂ ಒತ್ತಾಯ ಮಾಡಿಲ್ಲ. ನಿಜ ಏನೆಂದರೆ ಬನ್ನೂರು ಎಂ.ಎಲ್.ಎ. ಅವರ ಜೊತೆಯಲ್ಲಿ ಒಂದು ಗಂಪು ಹೆಣ್ಣುಮಕ್ಕಳು ಬಂದಿದ್ದರು. ಒಂದೂವರೆ ವರ್ಷದಲ್ಲಿ 15 ಹೆಣ್ಣುಮಕ್ಕಳು 40 ಸಾವಿರ ರೂಪಾಯಿಗಳನ್ನು ಉಳಿತಾಯ ಮಾಡಿದ್ದಾರೆ. ನನ್ನ ಮೂಡಿಗೆರೆ ತಾಲ್ಲೂಕಿನಲ್ಲಿ ಕಲ್‌ಗುಡ್ಡದಲ್ಲಿ 50 ಸಾವಿರ ರೂಪಾಯಿಗಳನ್ನು ಗುಂಪಿನಲ್ಲಿ ಉಳಿತಾಯ ಮಾಡಿದ್ದಾರೆ. ಅಂದರೆ ಈ ಸುತ್ತು ನಿಧಿಗೇ ಅವರು ಕಾದಿರಲಿಲ್ಲ ಎನ್ನುವುದಕ್ಕೆ ನಾನು ಉದಾಹರಣೆ ಕೊಡುತ್ತಿದ್ದೇನೆ ಅಷ್ಟೆ. ಖಂಡಿತವಾಗಿ ಅವರಿಗೆ ನಾವು ಯಾವ ರೀತಿಯಲ್ಲೂ ಮೋಸ ಮಾಡುವುದಿಲ್ಲ. ಅವರನ್ನು ಆರ್ಥಿಕವಾಗಿ ಸದೃಢರಾಗಿ ಮಾಡಬೇಕೆನ್ನುವುದೇ ಸರ್ಕಾರದ ಉದ್ದೇಶ ಮತ್ತು ಇಲಾಖೆ ಕೂಡ ಅದಕ್ಕೆ ಸರ್ವ ಪ್ರಯತ್ನ ಮಾಡುತ್ತಿದೆ ಎಂದು ನಾನು ತಮ್ಮ ಮೂಲಕ ಮಾನ್ಯ ಸದಸ್ಯರಿಗೆ ಹೇಳಬಯಸುತ್ತೇನೆ.